ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ. ಧಾರವಾಡ

# ಸಿ.ಸಿ.ನಂಃ 192/2025

**ಫಿರ್ಯಾದಿದಾರರು** ಃ ಕರ್ನಾಟಕ ಸರಕಾರ ಪರವಾಗಿ
ಪ್ರಭಾರ ಮುಖ್ಯ ಆಡಳಿತಾಧಿಕಾರಿಗಳು
ಪ್ರಧಾನ ಜಿಲ್ಲಾ ವ ಸತ್ರ ನ್ಯಾಯಾಲಯ,
ಧಾರವಾಡ
ಮೋಹನಗೌಡ ಸಿ ಹೀರೆಗೌಡರ
ವಯಾಃ 49 ವರ್ಷ, ಉಃ ಪ್ರಭಾರಿ ಮುಖ್ಯ ಆಡಳಿತಾಧಿಕಾರಿಗಳು
ಪ್ರಧಾನ ಜಿಲ್ಲಾ ವ ಸತ್ರ ನ್ಯಾಯಾಲಯ, ಧಾರವಾಡ.

**ವಿರುದ್ಧ**

ಆರೋಪಿ ಃ ಮಂಜುನಾಥ ತಂದೆ ಮರೆಪ್ಪ ತಳವಾರ
(ಜಾಮೀನುದಾರ)

## ದೋಷಾರೋಪಣೆ

ಅವಿನಾಶ್ ಎಂ. ಘಾಳಿ, ಬಿ.ಎ. ಎಲ್.ಎಲ್.ಬಿ., ಪ್ರಧಾನ ದಿವಾಣಿ ಮತ್ತು ಪ್ರಧಾನ ಜೆ.ಎಂ.ಎಫ್.ಸಿ ನ್ಯಾಯಾಧೀಶರು ಧಾರವಾಡ, ಆದ ನಾನು

ಇವರ ಮೇಲೆ ಕೆಳಕಂಡಂತೆ ದೋಷಾರೋಪಣೆ ಮಾಡುವುದೇನೆಂದರೆಃ

ಆರೋಪಿಯಾದ ನೀನು ಪ್ರಧಾನ ಜಿಲ್ಲಾ ವ ಸತ್ರ ನ್ಯಾಯಾಲದಲ್ಲಿ ಬಾಕಿ ಇರುವ ಕಡತ ವಿಶೇಷ ಎನಡಿಪಿಎಸ್ ಕ್ರಿಮಿನಲ್ ಮೊಕದ್ದಮೆ ಸಂಖ್ಯೆ **21/2024** ಪ್ರಕರಣದಲ್ಲಿ ದಿನಾಂಕಃ **09-12-2024** ರಂದು **5** ನೇ ಆರೋಪಿ (ಸಿದ್ಧಾರ್ಥ **@** ಸಿದ್ದು ತಂದೆ ರಮೇಶ ಅಥಣೆ) ಇವರಿಗೆ ಮಾನ್ಯ ನ್ಯಾಯಾಲದಿಂದ ಜಾಮೀನು ಮಂಜೂರಾಗಿದ್ದು, ಸದ್ರಿ ಜಾಮೀನು ಶರತ್ತಿನ ಪ್ರಕಾರ ದಿನಾಂಕಃ **07-01-2025** ರಂದು ಸದ್ರಿ ಪ್ರಕರಣದ **5** ನೇ ಆರೋಪಿಗೆ ನೀವು ಜಾಮೀನುದಾರರಾಗಿ ಒಪ್ಪಿ ನೀವು ಹಾಜುರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಮಾನ್ಯ ನ್ಯಾಯಾಲಯಕ್ಕೆ ನೀವು ಹಾಜರುಪಡಿಸಿದ ಆಧಾರ ಸಂಖ್ಯೆ **756558730469** ಸಮಂಜಸ ಇಲ್ಲದೇ ಇರುವುದು ಕಂಡು ಬಂದಿರುತ್ತದೆ. ಅಲ್ಲದೇ ಸದ್ರಿ ಪ್ರಕರಣದ **5** ನೇ ಆರೋಪಿಯ

ಜಾಮೀನಿಗೆ ಒಪ್ಪಿ, ನಿಮಗೆ ಸಂಬಂದಿಸಿದ ದುಬ್ಬನಮರಡಿ ಗ್ರಾಮದ ಸರ್ವೆ ನಂಃ **186/**ಬಿ ದಾಖಲೆಯನ್ನು ಮಾನ್ಯ ನ್ಯಾಯಾಲಯವು ಪರಿಶೀಲಿಸಿದಾಗ ಸದ್ರಿ ಆಸ್ತಿಯು ಈಗಾಗಲೇ ಬೆಳಗಾವಿಯ **6** ನೇ ಹಚ್ಚುವರಿ ಜಿಲ್ಲಾ ನ್ಯಾಯಾಲಯದಲ್ಲಿಯ ಪ್ರಕರಣದಲ್ಲಿ ಭದ್ರತೆಗಾಗಿ ಇಟ್ಟಿರುವುದು ಮಾನ್ಯ ನ್ಯಾಯಾಲಕ್ಕೆ ಕಂಡು ಬಂದಿರುತ್ತದೆ. ಆರೋಪಿಯಾದ ನೀವು ಈ ಮೇಲ್ಕಂಡ ಪ್ರಕರಣದ **5**ನೇ ಆರೋಪಿತರ ಪರ ಜಾಮೀನುದಾರರಾಗಲು ಒಪ್ಪಿ ಸುಳ್ಳು ಪ್ರಮಾಣ ಪತ್ರ, ಸುಳ್ಳು ಘೋಷಣಾ ಪತ್ರ, ನಕಲಿ ಆಧಾರ ಕಾರ್ಡ ಮತ್ತು ನಕಲಿ ದಾಖಲೆ ಉದ್ದೇಶಪೂರ್ವಕವಾಗಿ ಸಲ್ಲಿಸಿ ನ್ಯಾಯಾಲಯಕ್ಕೆ ವಂಚಿಸಿ ಆ ಮೂಲಕ ಆರೋಪಿಯಾದ ನೀನು ಭಾ.ದಂ.ಸಂ. ಕಲಂ.223 ಮತ್ತು 379 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ. ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

ಈ ದೋಷಾರೋಪಣೆಯನ್ನು ನಿಮ್ಮ ಮೇಲೆ ಮಾಡಲು ನಾನು ಬದ್ಧನಾಗಿರುತ್ತೇನೆ.

ದಿನಾಂಕ ಃ 03-01-2026

(ಅವಿನಾಶ್ ಎಂ. ಫಾಳಿ)
ಪ್ರ.ದ. ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ., ಧಾರವಾಡ.